# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 287 |
| ಉತ್ತರಿಸಬೇಕಾದ ದಿನಾಂಕ | 04.03.2020 |
| ಮಾನ್ಯ ಸದಸ್ಯರ ಹೆಸರು | ಡಾ:ಜಯಮಾಲ ರಾಮಚಂದ್ರ, |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಗ್ರಾಮೀಣ ಪ್ರದೇಶ ಹಾಗೂ ಸುತ್ತಮುತ್ತಲಿನ ಪ್ರದೇಶದ ರೈತರು ಹಾಗೂ ಸಾರ್ವಜನಿಕರು ಪಹಣಿ ಪತ್ರವನ್ನು ಎಲ್ಲೆಲ್ಲಿ ಪಡೆಯಬಹುದು; | ರೈತರು ಹಾಗೂ ಸಾರ್ವಜನಿಕರು ಪಹಣಿಗಳನ್ನು ಗ್ರಾಮ ಪಂಚಾಯತಿ, ನಾಡ ಕಛೇರಿ ಮತ್ತು ತಾಲ್ಲೂಕು ಕಛೇರಿಗಳಲ್ಲಿ ಪಡೆಯಬಹುದಾಗಿರುತ್ತದೆ. ಇದಲ್ಲದೇ, ಆನ್‌ಲೈನ್ ಮುಖಾಂತರ ಅಥವಾ ಸೈಬರ್ ಕೆಫೆಗಳಲ್ಲಿಯೂ ಸಹ ಮುದ್ರಿಸಿಕೊಳ್ಳುವ ಸೌಲಭ್ಯವನ್ನು ಕಲ್ಪಿಸಲಾಗಿದೆ. |
| ಆ | ತಹಶೀಲ್ದಾರ್ ಕಛೇರಿಯಲ್ಲಿ ಪಹಣಿ ಪಡೆಯಲು ರೈತರು ಹಾಗೂ ಸಾರ್ವಜನಿಕರು ತೊಂದರೆಯನ್ನು ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ |
| ಇ | ಸರ್ಕಾರ ಪಹಣಿ ಪಡೆಯಲು ಇರುವ ನಿಯಮವನ್ನು ಸರಳೀಕರಣ ಮಾಡಲು ಆಲೋಚಿಸಿದೆಯೇ; ಹಾಗಿದ್ದಲ್ಲಿ, ಮಾಡಲಾಗುವುದು ಯಾವಾಗ? | ಈಗಾಗಲೇ ರೈತರು ಹಾಗೂ ಸಾರ್ವಜನಿಕರು ಕಂಪ್ಯೂಟರ್ ಅಥವಾ ಸೈಬರ್‌ಕೆಫೆ ಮುಖಾಂತರ ಆನ್‌ಲೈನ್ ವಾಲೆಟ್ ಸೌಲಭ್ಯವನ್ನು ಬಳಸಿ ಕರ್ನಾಟಕದ ಯಾವುದೇ ಜಮೀನಿನ ಪಹಣಿಯನ್ನು ಯಾವುದೇ ಸಮಯಗಳಲ್ಲಿಯೂ ಸಹ ಪಡೆಯುವಂತೆ i-RTC ವ್ಯವಸ್ಥೆಯು ಜಾರಿಯಲ್ಲಿರುತ್ತದೆ. |

ಕಂಇ 28 ಎಂಆರ್‌ಆರ್ 2020

(ಆರ್. ಅಶೋಕ್)
ಕಂದಾಯ ಸಚಿವರು